ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
BE BOUNDLESS
ಜ್ಞಾನ ಜ್ಯೋತಿ-ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
**Ph.No.080-22961016 / 22131385 E-Mail ID: registrar@bcu.ac.in**

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2024-25 ದಿನಾಂಕ: 28.08.2024

## ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2024-25ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**(Through the UUCMS Online portal https://uucms.karnataka.gov.in/Login/Index)**

### ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ / ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:

**ಅ. ಕಲಾ ನಿಕಾಯ:**

ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ನಗರ ಅಧ್ಯಯನ ಮತ್ತು ಯೋಜನೆ,

ಎಂ.ವಿ.ಎ: 1. ಅನಿಮೇಷನ್ ಡಿಸೈನ್ 2. ಇಂಟಿರಿಯರ್ ಡಿಸೈನ್ 3. ಅಪ್ಲೈಡ್ ಆರ್ಟ್ಸ್ 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್, 6. ಪ್ರಿಂಟ್ ಮೆಕಿಂಗ್, 7. ಸ್ಕಲ್ಪಚರ್.

**ಆ. ವಿಜ್ಞಾನ ನಿಕಾಯ:**

- ಎಂ.ಎಸ್ಸಿ : ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಜೈವಿಕ ತಂತ್ರಜ್ಞಾನ, ಸೂಕ್ಷ್ಮಜೀವ ಶಾಸ್ತ್ರ, ಮನಃಶಾಸ್ತ್ರ, ಮಾನಸಿಕ ಸಮಾಲೋಚನೆ, ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಜಿ, ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್, ನ್ಯೂಟ್ರೀಷನ್ ಅಂಡ್ ಡಯಾಟಿಕ್ಸ್, ಗಣಕ ವಿಜ್ಞಾನ

**ಪಿಜಿ ಡಿಪ್ಲೋಮಾ – ಮನೋವೈಜ್ಞಾನಿಕ ಸಮಾಲೋಚನೆ**

**ಇ. ವಾಣಿಜ್ಯ ನಿಕಾಯ:**

1. ಎಂ.ಕಾಂ. ಮಾಸ್ಟರ್ ಆಫ್ ಕಾಮರ್ಸ್ (ಜನರಲ್)
2. ಎಂ.ಕಾಂ– ಮಾಸ್ಟರ್ ಆಫ್ ಕಾಮರ್ಸ್ (ಫೈನಾನ್ಸಿಯಲ್ ಅನಾಲಿಸಿಸ್)
3. ಎಂ.ಕಾಂ– ಮಾಸ್ಟರ್ ಆಫ್ ಕಾಮರ್ಸ್ (ಇಂಟರ್‌ನ್ಯಾಷನಲ್ ಬಿಸಿನೆಸ್)
4. ಎಂಟಿಟಿಎಂ– (ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್)

**ಪಿಜಿ ಡಿಪ್ಲೋಮಾ ಕೋರ್ಸ್‌ಗಳು**

1. ಪಿಜಿಡಿ– (ಬಿಸಿನೆಸ್ ಅಡ್ಮಿನಿಸ್ಟ್ರೇಷನ್)
2. ಪಿಜಿಡಿ– (ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್)
3. ಪಿಜಿಡಿ– (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್)
4. ಪಿಜಿಡಿ– (ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್)
5. ಪಿಜಿಡಿ– (ಇಂಡಸ್ಟ್ರಿಯಲ್ ಅಂಡ್ ಕನ್ಸ್ಟ್ರಕ್ಷನ್ ಸೇಫ್ಟಿ ಮ್ಯಾನೇಜ್‌ಮೆಂಟ್)

**ಈ. ಶಿಕ್ಷಣ ನಿಕಾಯ: ಎಂ.ಎಡ್ (ಶಿಕ್ಷಣ)**

ಪು.ತಿ.ನೋ

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

1. ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal** ಮೂಲಕವೇ **Online** ನಲ್ಲಿ **ದಿನಾಂಕ: 02.09.2024ರಿಂದ https://uucms.karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ**
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4. ವಿದ್ಯಾರ್ಥಿಗಳು **ರೂ. 500**/-ಅರ್ಜಿ ಶುಲ್ಕದೊಂದಿಗೆ 3 ವಿಷಯಗಳಿಗೆ ಅರ್ಜಿ ಸಲ್ಲಿಸಲು **UUCMS Portal** ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ **ರೂ. 500**/-ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. (ಪ.ಜಾ/ಪ.ಪಂ, ಪ್ರವರ್ಗ-1 ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ ರೂ. 250/- ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಪಾವತಿಸಬೇಕು.
5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in ನ್ನು ಸಂಪರ್ಕಿಸಲು ಕೋರಿದೆ.
6. 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು **ದಿನಾಂಕ: 20.09.2024 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸ ಬಹುದಾಗಿದ್ದು ಆನಂತರ ದಿನಾಂಕ: 30.09.2024 ರ ವರೆಗೆ ರೂ.200/- ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.**
7. UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
8. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ಕೆಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು -560 001"** ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
9. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು. **UUCMS Portal** ಮೂಲಕ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
10. ವಿಷಯ ಸೂಚನೆ: ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 10 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ.
11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:080-22961016/22131385 ಮಿಂಚಂಚೆ: registrar@bcu.ac.in

ಆದೇಶದ ಮೇರೆಗೆ

**ಕುಲಸಚಿವರು**